# ಸಣ್ಣಕಥೆಯ ದೊಡ್ಡಲೋಕ

ಒಂದು ಸಣ್ಣಕಥೆ ಓದುವುದಕ್ಕೆ ಸ್ವಲ್ಪ ಸಮಯ ಮಾತ್ರ ಹಿಡಿಯುತ್ತದೆ. ಆದರೆ 'ಸಣ್ಣಕಥೆ ಚಿರಾಯುವಾಗಲಿ' ಎಂದು ಜಗತ್ತಿನ ಅಕ್ಷರೋದ್ಯಮ ಹೇಳುತ್ತಿದೆ. 2012 ಅನ್ನು 'ಸಣ್ಣಕಥೆಗಳ ವರ್ಷ' ಎಂದು ಘೋಷಿಸಲಾಯಿತು. ಇಡೀ ವರ್ಷ ಸಣ್ಣಕಥೆಯನ್ನು ಸಡಗರ, ಸಂಭ್ರಮದಿಂದ ಕೆನಡಾ, ಬ್ರಿಟನ್ ಸೇರಿ ಜಗತ್ತಿನ ಅನೇಕ ದೇಶಗಳಲ್ಲಿ ವೈಭವೀಕರಿಸಲಾಯಿತು. ವರ್ಷ ಮುಗಿಯುತ್ತ ಬಂದಂತೆ ಸಣ್ಣಕಥೆಯ ಬಗ್ಗೆ ಇನ್ನಷ್ಟು ಕುತೂಹಲ ಹೆಚ್ಚುತ್ತಿದೆ. ವರ್ಷದ ಎಲ್ಲ ದಿನಗಳಿಗಿಂತ ಡಿಸೆಂಬರ್ 22 ಅತಿ ಚಿಕ್ಕ, ಅಂದರೆ ಹಗಲು ಕಡಿಮೆ ಇರುವ ದಿನವಷ್ಟೆ. ಆ ದಿನವನ್ನು ಪ್ರತೀ ವರ್ಷ 'ಸಣ್ಣಕಥೆಗಳ ದಿನ' ಎಂದೇಕೆ ಆಚರಿಸಬಾರದು ಎಂದು ಬ್ರಿಟನ್‌ನಲ್ಲಿ ಯಾರೋ ಹೇಳಿದ್ದೇ ಸಾಕು, ಕಥಾಪ್ರಿಯರು ಹಾಗೇ ಮಾಡೋಣ ಎಂದು ಸಜ್ಜಾಗುತ್ತಿದ್ದಾರೆ.



ಸೃಜನಶೀಲ ಗದ್ಯದಲ್ಲಿ ಕಾದಂಬರಿ ಎಷ್ಟು ಜನಪ್ರಿಯವಾದರೂ ಸಣ್ಣಕಥೆಯ ಬಗ್ಗೆ ಇರುವ ಪ್ರೀತಿ ಯಾವತ್ತೂ ಕಡಿಮೆಯಾಗುವುದಿಲ್ಲ. ಸಣ್ಣಕಥೆ ಹೇಳಿಕೇಳಿ ಸಣ್ಣದು, ಆದರೆ ಅದಕ್ಕೇ ಮೀಸಲಾದ ಪ್ರತಿಷ್ಠಿತ ಸ್ಪರ್ಧೆಗಳ ಪಟ್ಟಿ ವಿಪರೀತ ದೊಡ್ಡದು. ಕೆಲವು ಸ್ಪರ್ಧೆಗಳ ಬಹುಮಾನದ ಹಣವಂತೂ ಬಹಳ ಹೆಚ್ಚು. ಕಾಮನ್‌ವೆಲ್ತ್ ಸಣ್ಣಕಥೆ ಬಹುಮಾನ ಸೇರಿ ಅದಕ್ಕಿರುವ ಬಹುಮಾನಗಳು, ಪ್ರಶಸ್ತಿಗಳ ಸಂಖ್ಯೆ ಗಮನಾರ್ಹ. 'ಸಣ್ಣಕಥೆಗಳ ಸಂಕಲನಕ್ಕೆ ಬೇಡಿಕೆ ಇಲ್ಲ, ಅವು ಕಾದಂಬರಿಗಳಂತೆ ಮಾರಾಟವಾಗುವುದಿಲ್ಲ' ಎಂಬ ಪ್ರಕಾಶಕರ ಗೊಣಗಾಟ ಎಲ್ಲ ದೇಶಗಳಲ್ಲೂ ಎಲ್ಲ ಭಾಷೆಗಳಲ್ಲೂ ಇದ್ದದ್ದೇ. ಆದರೆ ಸಣ್ಣಕಥೆ ಎಂದಿಗೂ ಬರಹಗಾರರ ಸೃಜನಶೀಲತೆಗೆ ಸವಾಲು ಹಾಕುತ್ತ ಮಿನುಗುತ್ತಿದೆ. ಏಕೆಂದರೆ ಸಣ್ಣಕಥೆಗಿರುವ ಓದುಗ ವರ್ಗ ಬಹಳ ದೊಡ್ಡದು.

ಜಾಗತಿಕ ಸಾಹಿತ್ಯಲೋಕದ ಹೊಸ ಅಲೆ ಯಾವುದು ಅಂದರೆ ಸಣ್ಣಕಥೆಗೆ ಮತ್ತೆ ಪ್ರಾಪ್ತವಾಗಿರುವ ಪ್ರಾಶಸ್ತ್ಯ. 'ನಿಮಗೇ ಒಂದು ಓದುಗ ವರ್ಗವನ್ನು ಗಳಿಸಿಕೊಳ್ಳಬೇಕೇ– ಮೊದಲು ಕೆಲವು ಸಣ್ಣಕಥೆಗಳನ್ನು ಬರೆಯಿರಿ' ಎಂದು ಹೊಸ ಬರಹಗಾರರಿಗೆ ಹೇಳಲಾಗುತ್ತಿದೆ.; 'ಕಥೆ ಬರೆದು ನಂತರ ಕಾದಂಬರಿಗೆ ಕೈಹಾಕಿ' ಎಂಬ ಹಳೆಯ ತಂತ್ರವನ್ನು ಮತ್ತೆ ಉಪದೇಶಿಸಲಾಗುತ್ತದೆ. ಕನ್ನಡದ ಬರಹಗಾರರೂ ಇದನ್ನು ಗಮನಿಸಬೇಕು.

ನಿಮ್ಮ 'ಮಯೂರ' ಮಾಸಪತ್ರಿಕೆ, ಕಳೆದ ನಾಲ್ಕೂವರೆ ದಶಕಗಳಿಂದ ಕನ್ನಡದಲ್ಲಿ ಸಣ್ಣ ಕಥೆ ರಚನೆಯ ಸಕಲ ಪ್ರಯೋಗಗಳಿಗೂ ತೊಟ್ಟಿಲಾಗಿದೆ; ಈಗಲೂ ಹೊಸ ವಸ್ತು, ಹೊಸ ವಿನ್ಯಾಸದ ಸಣ್ಣಕಥೆಗಳನ್ನು ಪ್ರಕಟಿಸಲು ಹಾತೊರೆಯುತ್ತಿದೆ.

–ಆರ್. ಪೂರ್ಣಿಮಾ